**ಸಿ.ಸಿ. ನಂ.250/2019**
**PW-1,**

**ಸಾಕ್ಷಿಗೆ ಇಂದು ದಿನಾಂಕಃ 23.12.2024 ರಂದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಃ ಆರೋಪಿ ಪರ ಶ್ರೀಮತಿ ಎಸ್.ಎಂ.ಪಿ ವಕೀಲರಿಂದಃ**

ನಾನು ಹುಟ್ಟಿ ಬೆಳದ ಊರು ಕರಡಕಲ್ಲ ಗ್ರಾಮ ಇರುತ್ತದೆ. ಆರೋಪಿ ವಿಜಯರೆಡ್ಡಿ ಇವರ ಊರು ಮುದನೂರು ಗ್ರಾಮ ಇರುತ್ತದೆ ಎಂದರೆ ನಿಜ. ಆರೋಪಿ ಮತ್ತು ನಾನು 2-3 ವರ್ಷಗಳಿಂದ ಸ್ನೇಹಿತರು ಇರುತ್ತೇವೆ. ನನ್ನ ಮತ್ತು ಆರೋಪಿ ನಡುವೆ ಯಾವುದೇ ಬ್ಯಾಂಕಿನ ವ್ಯವಹಾರ ಇರುವುದಿಲ್ಲ, ಗುತ್ತಿಗೆ

ಕೆಲಸದಲ್ಲಿ ನನಗೂ ಮತ್ತು ಅವರಿಗೆ ವ್ಯವಹಾರ ಇರುತ್ತದೆ. ನನ್ನ ಮತ್ತು ಆರೋಪಿ ನಡುವೆ ಮೊದಲಿನಿಂದಲೂ ಹಣದ ವ್ಯವಹಾರ ಇರುವುದಿಲ್ಲ. ಆರೋಪಿತನು ಆತನ ಮನೆಯಲ್ಲಿ ಹಣಕಾಸಿನ ಸಮಸ್ಯ ಇರುವ ಸಲುವಾಗಿ ನನ್ನ ಹತ್ತಿರ ಹಣ ಪಡೆದುಕೊಂಡಿದ್ದನು. ಆರೋಪಿಗೆ ಸುಮಾರು 30-40 ಎಕರೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಅವರ ಮನೆಯ ವ್ಯವಹಾರದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಆರೋಪಿತನು ದಿನಾಂಕ 01.05.2013 ರಲ್ಲಿ ನನ್ನ ಹತ್ತಿರ ಹಣ ಪಡೆದುಕೊಂಡಿದ್ದನು. ಆ ದಿನ ನಾನು ಹಣ ಕೂಟ್ಟ ಬಗ್ಗೆ ಚಕನಾಗಲಿ, ಪ್ರಾಮಿಸಲಿ ನೋಟನ್ನು ಬರೆಸಿಕೂಂಡಿರಲಿಲ್ಲ, ಆರೋಪಿ 2-3 ದಿನಗಳಲ್ಲಿ ಹಣ ಮರಳಿ ಕೊಡುವುದಾಗಿ ತಿಳಿಸಿರುತ್ತಾನೆ. ನಾನು ಆರೋಪಿಗೆ ಹಣವನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆ ದಿನ ನಾನು ರೂ. 1,20,000/- ಗಳನ್ನು ಇಟ್ಟುಕೊಂಡಿದೀಯಾ ಎಂದು ಕೇಳಲು ಸಾಕ್ಷಿಯು ನನ್ನ ಹತ್ತಿರ ಭತ್ತ ಮಾರಿದ ಹಣ ಇತ್ತು ಎಂದು ನುಡಿಯುತ್ತಾರೆ. ಸದರಿ ಭತ್ತವನ್ನು ಮಾರಿದ ಹಣ ಇತ್ತು ಎಂದು ತೋರಿಸಲು ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಆರೋಪಿತನಿಗೆ ಹಣ ಕೊಟ್ಟ 15 ದಿನಗಳ ನಂತರ ಆರೋಪಿ ನನಗೆ ಚೆಕನ್ನು ಕೊಟ್ಟರುತ್ತಾನೆ. ಚೆಕನ್ನು ಬ್ಯಾಂಕಿಗೆ ಹೋಗಿ ಹಣ ತೆಗೆದಿಕೊ ಅಂತಾ ಚೆಕ ಕೊಟ್ಟಿರುತ್ತಾನೆ. ಸದರಿ ಚಕ್ ಮೇಲೆ ದಿ.15.05.2013 ಎಂದು ದಿನಾಂಕವನ್ನು ನಮೂದಿಸಿರುತ್ತಾನೆ. ನನ್ನ ಮತ್ತು ಆರೋಪಿತನ ನಡುವೆ ಆದ ವ್ಯವಹಾರಕ್ಕೆ ಭದ್ರತೆಗಾಗಿ ಚೆಕ್‌ನ್ನು ಕೊಟ್ಟಿದ್ದನು ಎಂದರೆ

ಸರಿಯಲ್ಲ. ಒಂದಗನೂರಿನ ಒಬ್ಬ ವ್ಯಕ್ತಿ ಮತ್ತು ಯಂಕಣ್ಣನ ನಡುವೆ ಆದ ವ್ಯವಹಾರದಲ್ಲಿ ಕೊಟ್ಟಂತಹ ಚೆಕ್‌ನ್ನು ನಾನು ದುರ್ಬಳಿಕೆ ಮಾಡಿಕೊಂಡು ಈ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮತ್ತು ಆರೋಪಿಯ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನಗೆ ಬರಬೇಕಾದ ಹಣ ಬರದೇ ಇದ್ದ ಕಾರಣ ನಾನು ಈ ಚೆಕ್‌ನ್ನು ಬಳಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.